(ಇಂದು ದಿನಾಂಕ 03/08/2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.)

**ಪಾಟೀ ಸವಾಲುಃ ಪ್ರತಿವಾದಿ ಪರವಾಗಿ ವಕೀಲರಾದ ಶ್ರೀ ಎಮ್.ಜಿ.ಎಚ್. ವಕೀಲರಿಂದ.**

ತಿಮ್ಮಯ್ಯ ಕುಪ್ಪಯ್ಯ ಎನ್ನುವವರು ನಮ್ಮ ಕುಟುಂಬದ ಮೂಲ ಪುರುಷ ಅಂದರೆ ಸರಿ. 1981 ರಲ್ಲಿ ತಿಮ್ಮಯ್ಯ ಕುಪ್ಪಯ್ಯ ಎನ್ನುವವರಿಗೆ ಭೂ ನ್ಯಾಯ ಮಂಡಳಿಯಿಂದ ಅಧಿಭೋಗದಾರಿಕೆಯ ಹಕ್ಕು ಮಂಜೂರಾಗಿದೆ ಅಂದರೆ ಸರಿ. 1988 ರಲ್ಲಿ ತಿಮ್ಮಯ್ಯ ಕುಪ್ಪಯ್ಯ ಎನ್ನುವವರು ಮೃತರಾಗಿದ್ದು, ಅವರ ಮಕ್ಕಳು ವಿಭಾಗ ಮಾಡಿಕೊಂಡಿದ್ದಾರೆ ಅಂದರೆ ಸರಿ. ಸದರಿ ವಿಭಾಗದ ಮೂಲಕ ದಾವಾ ಆಸ್ತಿಗಳು ನಮ್ಮ ತಂದೆಗೆ ಬಂದಿರುತ್ತವೆ ಅಂದರೆ ಸರಿ. ನಮ್ಮ ತಂದೆಯವರು 2004 ರಲ್ಲಿ ಕ್ಯಾನ್ಸರ್ ಕಾಯಿಲೆಯಿಂದ ಮೃತಪಟ್ಟಿದ್ದಾರೆ. ನಮ್ಮ ತಂದೆ 5 ವರ್ಷಗಳಿಂದ ಕ್ಯಾನ್ಸರ್ ಕಾಯಿಲೆಯಿಂದ ಬಳಲುತ್ತಿದ್ದರು ಎನ್ನುವುದು ಸರಿಯಲ್ಲ. 3 ವರ್ಷಗಳಿಂದ ಬಳಲುತ್ತಿದ್ದರು. ನಮ್ಮ ತಾಯಿ 2016 ರಲ್ಲಿ ಮೃತಪಟ್ಟಿದ್ದಾರೆ. ನಮ್ಮ ತಾಯಿ ಬ್ರೈನ್ ಯಾಮ್ರೇಜ್ ಆಗಿ ಮೃತಪಟ್ಟಿದ್ದಾರೆ ಅಂದರೆ ಸರಿ. ನನ್ನ ಮತ್ತು ಸಹೋದರ ಸಹೋರಿಯರ ಒಪ್ಪಿಗೆಯ ಮೇರೆಗೆ 1 ನೇ ಪ್ರತಿವಾದಿಯ ಹೆಸರಿಗೆ ಅಕುಮನಾತೆಯಿಂದ ಕಂದಾಯ ದಾಖಲೆಗಳಲ್ಲಿ ನಮೂದಾಗಿದೆ ಅಂದರೆ ಸರಿ. ನಾನು ಮತ್ತು ಪ್ರತಿವಾದಿಯರು ಈಗಲೂ ಒಟ್ಟು ಕುಟುಂಬದಲ್ಲಿ ವಾಸವಾಗಿದ್ದೇವೆ ಅಂದರೆ ಸರಿಯಲ್ಲ. ದಿನಾಂಕಃ 20-06-2023 ರಂದು ನನ್ನನ್ನು ಮನೆಯಿಂದ ಹೊರಗೆ

ಹಾಕಿದ್ದಾರೆ. 2023 ರವರೆಗೆ ಒಟ್ಟು ಕುಟುಂಬದಲ್ಲಿ ವಾಸವಾಗಿದ್ದೇವು ಅಂದರೆ ಸರಿ. 2 ನೇ ವಾದಿ 22 ವರ್ಷಗಳ ಹಿಂದೆ ವಿವಾಹವಾಗಿದ್ದಾರೆ. ನಮ್ಮ ಮೃತಪಡುವ 4-5 ವರ್ಷಗಳ ಮೊದಲು ವಿವಾಹವಾಗಿದ್ದಾರೆ. ನಮ್ಮ ತಂದೆಯ ಜೀವಿತ ಅವಧಿಯಲ್ಲಿ 2 ನೇ ವಾದಿಯನ್ನು ವಿರ್ಜಂಭನೆಯಿಂದ ಮದುವೆ ಮಾಡಿಕೊಟ್ಟಿದ್ದಾರೆ ಅಂದರೆ ಸರಿ. ದಾವಾ ಸಲ್ಲಿಸಲು ಇಬ್ಬರೂ ಒಪ್ಪಿಗೆಯ ಮೇರೆಗೆ ಮಾಹಿತಿ ಕೊಟ್ಟಿದ್ದೇನೆ. ವಾದ ಪತ್ರದ ಖಂಡಿಕೆ 5 ರಲ್ಲಿ ಬರೆದ ವಿಷಯಗಳು ಸರಿ ಇರುತ್ತವೆ. ನಮ್ಮ ತಂದೆಯ ಚಿಕಿತ್ಸೆಗಾಗಿ ಸಾಕಷ್ಟು ಹಣ ಪ್ರತಿವಾದಿಯರು ಖರ್ಚು ಮಾಡಿದ್ದಾರೆ ಎನ್ನುವುದು ಸರಿಯಲ್ಲ. ನಮ್ಮ ತಂದೆ ಹುಬ್ಬಳ್ಳಿಯಲ್ಲಿ ಕ್ಯಾನ್ಸರಗೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದರು ಅಂದರೆ ಸರಿ. ನಮ್ಮ ತಾಯಿಯ ಚಿಕಿತ್ಸೆಗಾಗಿ ನಮ್ಮ ಕುಟುಂಬದವರು ಸಾಕಷ್ಟು ಹಣ ಖರ್ಚು ಮಾಡಿದ್ದೇವೆ ಅಂದರೆ ಸರಿ.

2 ನೇ ವಾದಿಯ ಮದುವೆಗಾಗಿ ಸಾಕಷ್ಟು ಹಣ ಖರ್ಚಾಗಿದೆ ಅಂದರೆ ಸಾಕ್ಷಿಯು 2 ನೇ ವಾದಿ ಮತ್ತು 1 ನೇ ಪ್ರತಿವಾದಿಯ ಮದುವೆ ಒಟ್ಟಿಗೆ ಮಾಡಿದ್ದಾರೆ. ನಮ್ಮ ತಂದೆ ಕ್ಯಾನ್ಸರ್ ಕಾಯಿಲೆಯಿಂದ ಬಳಲುತ್ತಿರುವುದರಿಂದ ಮತ್ತು ಜಮೀನುಗಳ ಅಭಿವೃದ್ಧಿಗಾಗಿ ಸಾಕಷ್ಟು ಸಾಲ ಮಾಡಿದ್ದಾರೆ ಎನ್ನುವುದು ಸರಿಯಲ್ಲ. ದಾವಾ ಐ.ಟಮ್.ನಂ.1 ಮತ್ತು 2 ಭಾಗಾಯತ ಜಮೀನುಗಳು ಅಂದರೆ ಸರಿ. ದಾವಾ ಐ.ಟಮ್.ನಂ.4 ರಲ್ಲಿ ತೆಂಗಿನ ತೋಟ ಇದೆ. ಸದರಿ ಜಮೀನನ್ನು ನಮ್ಮ ತಂದೆ ಮೃತಪಟ್ಟ ನಂತರ ಅಭಿವೃದ್ಧಿ ಪಡಿಸಿದ್ದಾರೆ ಎನ್ನುವುದು ಸರಿಯಲ್ಲ. ದಾವಾ ಐ.ಟಮ್.ನಂ.1 ಮತ್ತು 2 ನ್ನು ನಮ್ಮ ತಂದೆ ಮೃತಪಟ್ಟ

ನಂತರ ಸಾಲ ಮಾಡಿ ಅಭಿವೃದ್ಧಿ ಪಡಿಸಿದ್ದಾರೆ ಎನ್ನುವುದು ಸರಿಯಲ್ಲ. ದಾವಾ ಬ ಶೆಡ್ಯೂಲ್ ಆಸ್ತಿಯಲ್ಲಿ ಅನಾಧಿಕಾಲದಿಂದ ಕಟ್ಟಿದ ಮನೆಯಾಗಿತ್ತು ಅಂದರೆ ಸರಿ. ದಾವಾ ಬ ಶೆಡ್ಯೂಲ್ ಆಸ್ತಿಯಲ್ಲಿರುವ ಮನೆ ಬಿದ್ದುಹೋಗುವ ಸ್ಥಿತಿಯಲ್ಲಿರುವುದರಿಂದ ನಮ್ಮ ತಂದೆ ಮೃತಪಟ್ಟ ನಂತರ ನವೀಕಲರಿಸಿದ್ದೇವೆ ಎನ್ನುವುದು ಸರಿಯಲ್ಲ. ನಮ್ಮ ತಂದೆಯ ಜೀವಿತಾ ಕಾಲದಲ್ಲಿಯೇ ಹೊಡದಾಗಿ ಬೇರೆ ಮನೆ ದಾವಾ ಐ.ಟಮ್.ನಂ.2 ರಲ್ಲಿ ಕಟ್ಟಿದ್ದೇವೆ ಎಂದು ಸಾಕ್ಷಿಯು ಸ್ವ-ಇಚ್ಚೆಯಿಂದ ಹೇಳುತ್ತಾರೆ. ಅದಕ್ಕೆ ಪಂಚಾಯತಿಯವರು ಮನೆ ನಂ.154 ಎಂದು ನಂಬರನ್ನು ಕೊಟ್ಟಿದ್ದಾರೆ. ಅದಕ್ಕೆ ಸಾಕಷ್ಟು ಹಣ ಖರ್ಚಾಗಿದೆ ಎನ್ನುವುದು ಸರಿಯಲ್ಲ. ಹಂತಹಂತವಾಗಿ ಕಟ್ಟಿಸಿದ್ದೇವೆ ಎಂದು ಉತ್ತರಿಸುತ್ತಾರೆ.

**ಮುಂದುವರೆದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು, ಶಿರಸಿ.

(ಪೀಠಾಸೀನ ಸಿದ್ದಾಪುರ)